ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/05/ಇಸಿಎಸ್(1)/2021

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
email:dte.commissioner@gmail.com
ದಿನಾಂಕ:23-03-2022

## ಸುತ್ತೋಲೆ

ವಿಷಯ: C-20 ಪಠ್ಯಕ್ರಮದ 1/2 ನೇ ಸೆಮಿಸ್ಟರ್ ನ (CIE) MakeUp ಪರೀಕ್ಷೆಗಳಲ್ಲಿ ಶೇ40ಕ್ಕಿಂತ ಹೆಚ್ಚು ಆಂತರಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಮಾರ್ಚ್/ಏಪ್ರಿಲ್ 2022 ಪರೀಕ್ಷೆ ಬರೆಯಲು ಅನುಮತಿಸುವ ಬಗ್ಗೆ.

ಉಲ್ಲೇಖ: 1. Regulations of Diploma Programme for the Curriculum-2020 14.2 Make up Examinations.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ 08 ಇಸಿಎಸ್(3)/2021 ದಿ:26-10-2021

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರನ್ವಯ 2020-21 ನೇ ಸಾಲಿನಲ್ಲಿ C-20 ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ ಯಾವುದೇ ವಿದ್ಯಾರ್ಥಿಯು ಶೇ.40ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು (CIE) ಪಡೆದಿದ್ದಲ್ಲಿ ಅಂತಿಮ ಪರೀಕ್ಷೆಗೆ (SEE) ಅನರ್ಹರೆಂದು (NE) ತಿಳಿಸಲಾಗಿದೆ.

ಮುಂದುವರೆದು ಅಂತಹ ವಿದ್ಯಾರ್ಥಿಗಳಿಗೆ ಉಲ್ಲೇಖ (2) ರ ಸುತ್ತೋಲೆಯಲ್ಲಿ C-20 ಪಠ್ಯಕ್ರಮದ 1/2 ನೇ ಸೆಮಿಸರ್‌ಗಳ ವಿಷಯಗಳಲ್ಲಿ Continuous Internal Evaluation (CIE) Make Up ಕಿರು ಪರೀಕ್ಷೆಗಳನ್ನು ನಡೆಸುವಂತೆ ತಿಳಿಸಲಾಗಿತ್ತು. ಅದರಂತೆ ಸದರಿ (CIE) Make Up ಕಿರು ಪರೀಕ್ಷೆಗಳಲ್ಲಿ ಶೇ.40 ಮತ್ತು ಹೆಚ್ಚು ಆಂತರಿಕ ಅಂಕಗಳನ್ನು ಪಡೆದು ಅರ್ಹತೆ ಹೊಂದುವ ವಿದ್ಯಾರ್ಥಿಗಳಿಗೆ 2021-22ನೇ ಶೈಕ್ಷಣಿಕ ಸಾಲಿನಲ್ಲಿ ಮಾರ್ಚ್/ಏಪ್ರಿಲ್ 2022 ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಎಲ್ಲಾ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು (ಪ್ರಾಯೋಗಿಕ/ ಥಿಯರಿ ಪರೀಕ್ಷೆಗಳು)/ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿದೆ. ಶೇ.40 ಮತ್ತು ಹೆಚ್ಚು ಆಂತರಿಕ ಅಂಕಗಳನ್ನು ಪಡೆದು ಅರ್ಹತೆ ಹೊಂದುವ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಮಾರ್ಚ್/ಏಪ್ರಿಲ್ 2022ರ ಥಿಯರಿ ಪರೀಕ್ಷಾ ಅವಧಿಯಲ್ಲಿ ಮಂಡಳಿಯಿಂದ ನೇಮಕಗೊಂಡ ಆಂತರಿಕ ಅಂಕಗಳ ಪರಿವೀಕ್ಷಕರು ಪರಿಶೀಲಿಸಿ BTE Linx webportal ಮೂಲಕ Upload ಮಾಡಲು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

ಇವರಿಗೆ,
1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ -ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ
2. ಪರೀಕ್ಷಾ ಕೇಂದ್ರದ ಮುಖ್ಯ ವೀಕ್ಷಕರು/ ಮುಖ್ಯ ಅಧೀಕ್ಷಕರು/ ಉಪ ಮುಖ್ಯ ಅಧೀಕ್ಷಕರು/ ಆಂತರಿಕ ಅಂಕಗಳ ಪರಿವೀಕ್ಷಕರು -ಅಗತ್ಯ ಕ್ರಮಕ್ಕಾಗಿ

ಪ್ರತಿ: 1. ಇ-ಗವರ್ನೆನ್ಸ್ - ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ - ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಇಸಿಎಸ್ ವಿಭಾಗಕ್ಕೆ